**ಓ.ಎಸ್. ನಂ.85/2022**

**ಪಿಡಬ್ಲೂ:02**

**ಇಂದು ದಿನಾಂಕ:23.10.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದಃ**

ನಾನು 7 ನೇ ತರಗತಿ ಓದಿದ್ದೇನೆ. ವಾದಿ ಈಗ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ, ಅವರು ಈಗ ಓಡಾಡುತ್ತಿದ್ದಾರೆ. ವಾದಿ ನನಗೆ ವಿಶೇಷ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ, ನಾನು ಹಾಜರು ಪಡಿಸಿರುವ ಅಧಿಕಾರ ಪತ್ರವನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಈ ಕೇಸು ಹಾಕಿದ್ದಾರೆ. ಪ್ರತಿವಾದಿಗಳು ನನ್ನ ತಂಗಿಯ ಮಕ್ಕಳು ಎಂದರೆ ಸರಿ. ವಾದ ಪತ್ರದಲ್ಲಿ ಇರುವ ವಿಷಯಗಳನ್ನು ತಿಳಿದಿದ್ದೇನೆ. ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಬರೆಸಿದ್ದಾರೆ ಅಂತ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪೈಕಿ 4 ಎಕರೆ ವಿಸ್ತೀರ್ಣವನ್ನು ನನ್ನ ತಂದೆ ಪ್ರತಿವಾದಿಗಳ ತಾಯಿ ರೇಣುಕ್ಕ ರವರಿಗೆ ಭಾಗ ಕೊಟ್ಟು ಎಂ.ಆರ್.ನಂ.16/1988-89 ಪ್ರಕಾರ ಖಾತೆ ಮಾಡಿಸಿಕೊಟ್ಟಿದ್ದಾರೆ ಎಂದೆರ ಸುಳ್ಳು. ಅಂದಿನಿಂದಲೂ ಪ್ರತಿವಾದಿಗಳಿಗೆ ಸ್ವಾಧೀನ ಇದ್ದುಕೊಂಡು ಅನುಭವಿಸಿಕೊಳ್ಳುತ್ತಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳ ತಾಯಿಯನ್ನು ನನ್ನ ತಂದೆ ಮನೆಯಲಿಯೇ ಇಟ್ಟುಕೊಂಡು ಕೃಷ್ಣೇಗೌಡರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ ಬದುಕಿರುವವರೆಗೂ ರೇಣುಕ್ಕ ಅವರ ಕಷ್ಟ ಸುಖಗಳನ್ನು ನೋಡಿಕೋಂಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳ ತಾಯಿ ಗೌರಿ ಹಬ್ಬಕ್ಕೆ ಎಂದು ನಮ್ಮ ಮನೆಗೆ ಬಂದಿದ್ದರು ಆಗ ಆಕಸ್ಮಿಕವಾಗಿ ನಮ್ಮ ಮನೆಗೆ ಬೆಂಕಿ ಬಿದ್ದು ನನ್ನ ತಾಯಿ ಮತ್ತು ಪ್ರತಿವಾದಿಗಳ ತಾಯಿ ಮೃತ ಪಟ್ಟಿದ್ದರು. ಆ ರೀತಿ ಸುಟ್ಟು ಹೋದ ಮನೆ ಪ್ರತಿವಾದಿಗಳ ತಾಯಿಗೆ ಕೊಟ್ಟಿದ್ದ 4 ಎಕರೆ ಜಮೀನಿನ ಒಳಗೆ ಇತ್ತು ಎಂದರೆ ಸರಿಯಲ್ಲ. 7 ಎಕರೆ 11 ಗುಂಟೆ ಜಮೀನಿನ ಒಳಗೆ ಇತ್ತು. ಪ್ರತಿವಾದಿಗಳ ತಾಯಿ ಮೃತ ಪಟ್ಟ ಕಾರಣ ಅವರ ತಂದೆ ಮೈನರ್ ಗಾರ್ಡಿಯನ್ ಆಗಿ ಪ್ರತಿವಾದಿಗಳ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಹಾಲಿ ದಾವಾ ಆಸ್ತಿಯ ಪೈಕಿ 4 ಎಕರೆ ಜಮೀನಿಗೆ ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಇದೆ ಎಂದರೆ ಸುಳ್ಳು.

**ಓ.ಎಸ್. ನಂ.*85/2022***

**ಪಿಡಬ್ಲೂ:*02***

ಒ.ಎಸ್.ನಂ. 93/2005 ರಲ್ಲಿ ಜಯಲಕ್ಷ್ಮಿ ಮತ್ತು ಇತರರು ನನ್ನ ವಿರುದ್ಧ ಕೇಸು ಹಾಕಿದ್ದರು ಎಂದರೆ ಸರಿ. ಒ.ಎಸ್.ನಂ.93/2005 ರಲ್ಲಿ ನನ್ನ ಪತ್ನಿ ಸಾಕ್ಷ್ಯ ನುಡಿಯುತ್ತಾ ದಾವಾ ಆಸ್ತಿಯ ಪೈಕಿ ಪ್ರತಿವಾದಿಗಳ ತಾಯಿಗೆ 4 ಎಕರೆ ಜಮೀನು ಕೊಟ್ಟಿರುವುದು ಒಪ್ಪಿಕೊಂಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳು ಸ್ವಾಧೀಕ ಇರುವ ಜಮೀನಿಗೆ ನನ್ನ ತಮಾತುಕೇಳಿ ನನ್ನ ತಂದೆ ತೊಂದರೆ ಕೊಟ್ಟಿದ್ದಾರೆ ಎಂದರೆ ಸುಳ್ಳು. 4 ಎಕರೆ ಜಮೀನಿಗೆ ತೊಂದರೆ ಕೊಡಬಾರದೆಂದು ಪಿರಿಯಾಪಟ್ಟಣದ್ದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಒ.ಎಸ್.ನಂ.175/2021 ರಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅದು ವಜಾ ಆಗಿದೆ. ಪೂರ್ವಕ್ಕೆ–ನನ್ನ ತಂದೆಗೆ ಇರುವ 3 ಎಕರೆ 11 ಗುಂಟೆ ಜಮೀನು, ಪಶ್ಚಿಮಕ್ಕೆ–ಮಲ್ಲೇಶ ರವರ ಜಮೀನು, ಉತ್ತರಕ್ಕೆ–ಒಣಿ, ದಕ್ಷಿಣಕ್ಕೆ–ಬೆಟ್ಟೇಗೌಡರ ಜಮೀನು ಈ ಚೆಕ್ಕುಬಂದಿ ಒಳಗೆ ಇರುವ 4 ಎಕರೆ ಜಮೀನನ್ನು ಪ್ರತಿವಾದಿಗಳು ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ಸದರಿ ಜಮೀನಿನಲ್ಲಿ ಪ್ರತಿವಾದಿಗಳ ತಂದೆ ಒಂದು ಬ್ಯಾರನ್ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**